ನನ್ನ ಅನಿಸಿಕೆ ಸ್ಪಷ್ಟವಾಗಿ ಹೇಳಲು ಕಷ್ಟ ಅನ್ನಿಸಿತ್ತು. ತರ್ಕ ಎಳೆದದ್ದೇ ದಾರಿ. ಗಿರಿಜೆಯೂ ನರ್ಮದೆಯೂ ಒಂದು ಸಮ್ಮತ ಒಮ್ಮತಕ್ಕೆ ಬರಬೇಕು ಅಷ್ಟೇ ಅನ್ನಿಸಿತು.

***

ಅಂದು ಸಂಬಂಧಿಕರ ಮದುವೆಯ ಸಮಾರಂಭದಲ್ಲಿ ಅನಿರೀಕ್ಷಿತವಾಗಿ ನರ್ಮದೆಯ ಭೇಟಿಯಾಗಿತ್ತು. ಮಾವನವರ ವರ್ಷಾಬ್ದಿಕ ಆದ ಕೂಡಲೇ ಆ ಮನೆಯನ್ನು ಬಾಡಿಗೆಗೆ ಕೊಡೋದು ಅಂತ ಆಗಿದೆ. ಒಳ್ಳೆಯ ಜನ ನಿಮ್ಮ ಗಮನಕ್ಕೆ ಬಂದರೆ ಹೇಳಿ ಆಂಟಿ ಎಂದಾಗ ಹಿಂದಿನ ವಾರ ಗೆಳತಿ ವಿಚಾರಿಸಿದ್ದು ನೆನಪಾಗಿ ನನ್ನ ಫ್ರೆಂಡ್ ಕಡೆ ಒಂದು ಹುಡುಗಿಗೆ ಮೆಡಿಕಲ್ ಸೀಟ್ ಸಿಕ್ಕಿದೆಯಂತೆ ಕಾಲೇಜು ನಮ್ಮ ಮನೆಗೆ ಸಮೀಪ. ಈಗ ಸದ್ಯಕ್ಕೆ ಪೀಜಿಲಿ ಇದ್ದಾಳೆ. ಅಲ್ಲಿ ವಾತಾವರಣ ಅಷ್ಟು ಇಷ್ಟವಾಗ್ತಿಲ್ಲ. ಸಣ್ಣ ಮನೆ ಸಿಕ್ರೆ ಮಗಳಿಗೋಸ್ಕರ ಅವರ ತಾಯಿ ಶಿಫ್ಟ್ ಆಗ್ತಾರೆ ಅಂತಿದ್ಲು ನೀನು ಒಮ್ಮೆ ಮಾತಾಡು, ಕಾಂಟಾಕ್ಟ್ ಕಳಿಸ್ತೀನಿ ನನ್ನ ಹೆಸರು ತೊಗೊಂಡು ಪರಿಚಯ ಮಾಡಿಕೊ, ಅಬ್ಬಬ್ಬಾ ಅಂದ್ರೆ ಇನ್ನು ನಾಲ್ಕು ತಿಂಗಳು ದಿನಗಳು ಎಷ್ಟು ಬೇಗ ಹೋಗುತ್ತವೆ, ನೋಡು ಥ್ಯಾಂಕ್ಸ್ ಆಂಟಿ, ನಾನು ಮಾತಾಡ್ತೀನಿ. ಕೊನೆಗೂ ಅತ್ತೆಯವರು ನಿಮ್ ಜೊತೆ ಇರೋಕ್ಕೆ ಒಪ್ಪಿದರಾ? ಅದೂ ಮನೇನೂ ಬರ್ಕೊಟ್ಟು ಕೇಳಬೇಕೆನ್ನಿಸಿದರೂ ಸಾಧುವಲ್ಲವೆನಿಸಿ ಸಂಯಮ ತಂದುಕೊಂಡೆ.

ವರ್ಷದ ತಿಥಿಯ ಮರುದಿನದ ಶುಭಕ್ಕೆ ನಾವೆಲ್ಲರೂ ಮತ್ತೆ ಸೇರಿದ್ದವು. ನರ್ಮದೆ ನಗುನಗುತ್ತಲೇ ನಮ್ಮನ್ನೆಲ್ಲ ವಿಚಾರಿಸಿಕೊಂಡು ಉಪಚರಿಸಿದಳು. ಗಿರಿಜೆಯ ಮುಖದಲ್ಲಿ ಮಿಶ್ರ ಭಾವ. ಮಿನಿ ಛತ್ರದ ರೂಮಿನಲ್ಲಿ ಕುಳಿತಿದ್ದರು. ಪಕ್ಕದಲ್ಲಿ ವಾರಿಜ ಇತರ ಸದಸ್ಯರು, ಊಟ ತಡವಾಗಬಹುದು ಅನ್ನಿಸಿ ಅಲ್ಲಿಯೇ ಉಪಸ್ಥಿತರಿದ್ದರು. ನಾನೂ ಅವರನ್ನು ಸೇರಿಕೊಂಡೆ. ಇನ್ನೇನು ಮುಂದಿನ ವಾರ ರಿಜಿಸ್ಟ್ರೇಷನ್, ಆಮೇಲೆ ಹೊರಟುಬಿಡ್ತೀನಿ, ಗಿರಿಜೆ ಮಾತು ಶುರು ಮಾಡಿದರು ಕಣ್ಣೊರೆಸಿಕೊಳ್ಳುತ್ತ. ಎಲ್ಲ ಯೋಚ್ನೆ ಮಾಡಿ ತಾನೇ ನಿರ್ಧಾರ ತೊಗೊಂಡಿರೋದು. ವಾರಿಜ, ಗಿರಿಜೆಯ ಬದಿಗೆ ಮತ್ತೂ ಸರಿದರು. ಹೌದು ವಾರಿಜ, ಕಷ್ಟ ಅಂತ ಯಾರ್ಯಾರನೋ ಕೈಕಾಲು ಹಿಡಿಯೋಕ್ಕಿಂತ ನಮ್ಮ ಮಕ್ಕಳೇ ವಾಸಿ. ಮಗನ ಜಾಗದಲ್ಲಿ ನನ್ನ ಭಾರವನ್ನು ಹೊರಲು ಸಿದ್ಧಳಿದ್ದಾಳೆ. ಮೊನ್ನೆ ತನ್ನ ಆಫೀಸ್ ರೆಕಾರ್ಡ್ಸ್‌ನಲ್ಲಿ ನನ್ನ ಹೆಸರನ್ನು ಸೇರಿಸಿದ್ದಾಳೆ ಹೆಲ್ತ್ ಇನ್ಸೂರೆನ್ಸ್ ಪಾಲಿಸಿಗೂ ಸೇರ್ಪಡೆಯಾಯ್ತು.

ಅವಳ ಗಂಡ ಹೋದಾಗ ನಾನು ತುಂಬಾ ಕೀಳಾಗಿ ವರ್ತಿಸಿದೆ ಅಂತ ನನಗೆ ನಾಚಿಕೆಯಾಗುತ್ತೆ. ನೀವೂ ಬೇಡ, ನಿಮ್ಮ ಆಸ್ತಿನೂ ಬೇಡ ಅಂದರೆ ನಾ ಎಲ್ಲಿಗೆ ಹೋಗ್ಲಿ? ನಾನು ಹೋದ್ಮೇಲೆ ವಾರಸಿಲ್ಲದ ಮನೆ ಅದೂ ಇದೂ ಅಂತ ಹದ್ದಿನ ಕಂಗಳ ಹಾಗೆ ಕಾಯ್ತಿರೋ ಮಂದಿ, ನೂರೆಂಟು ತಕರಾರು ಬೇಡ ಅನ್ನಿಸಿತು. ವಿಲ್ ಮಾಡಿ ನಂತರ ತೊಗೊಳ್ಳೋಕ್ಕಿಂತ ನಮ್ಮ ಕಷ್ಟಕ್ಕೆ ಆದರೆ ಒಳ್ಳೇದೇ ಅಂತ ನನಗೂ ತೋರಿತು. ಬಾಡಿಗೆಗೆ ಗೊತ್ತು ಮಾಡಿದ್ರೆ ದುಡ್ಡು ಇರುತ್ತೆ ಆಸ್ತಿನೂ ಉಳಿಯುತ್ತೆ. ಮುಖ್ಯವಾಗಿ ನೆಮ್ಮದಿ ಬೇಕು. ಆಶ್ರಮಕ್ಕೆ ಹೋದರೂ ಅಲ್ಲೊಂದು ವ್ಯಾವಹಾರಿಕ ಬಂಧವೇ ಹೊರತು ಆಪ್ತತೆ, ಆತ್ಮೀಯತೆ ಎಲ್ಲಿ ಬರುತ್ತೆ? ಯಾವತ್ತಿದ್ರೂ ಮಗನಿಗೇ. ಈಗ ಅವನಿಲ್ಲ, ಸೊಸೆಗೆ ಅಷ್ಟೇ, ನನ್ನ ಕಷ್ಟ ನೋಡಲಾಗದೆ ನನ್ನ ತವರು ಒಂದು ಸೂರು ತೋರಿಸಿದರು. ನನ್ನ ಸೊಸೆಗೆ ಕಷ್ಟವಿಲ್ಲದಿಲ್ಲ ಬರೋ ಸಂಬಳದಲ್ಲಿ ಮನೆ ತೂಗಿಸೋದು ಕಷ್ಟ ಈ ದುಬಾರಿ ಕಾಲದಲ್ಲಿ, ಅವಳ ಹೆಸರಲ್ಲಿ ಇದ್ದರೆ ಅವಳಿಗೂ ಒಂದು ನಂಬಿಕೆ, ಇದರಲ್ಲಿ ತಪ್ಪೇನು ಇಲ್ಲ ಬಿಡಿ, ಒಂದು ಕಾಲದಲ್ಲಿ ಅವಳ ಜಾಗದಲ್ಲಿ ನಾನು ನನ್ನ ಮನೆಯವರ ಮುಂದೆ ನಿಂತಿದ್ದೆ, ಈಗ ಒಂದು ವ್ಯತ್ಯಾಸ ಅಂದ್ರೆ ಅವಳು ನನ್ನನ್ನು ಸಹಿಸಿಕೊಳ್ಳಬೇಕಾಗಿಲ್ಲವಾದರೂ ಬನ್ನಿ ಅಂತ ಕರೀತಿರೋದು, ನಾನೇ ಸ್ವಲ್ಪ ಬಿಟ್ಟುಕೊಟ್ಟರೆ ಸಮಸ್ಯೆ ಇಲ್ಲ. ಎಲ್ಲ ಒಳ್ಳೇದಾಗುತ್ತೆ ದೇವರಿದ್ದಾನೆ ಬಿಡಿ; ವಾರಿಜ ಧೈರ್ಯ ತುಂಬಿದರು.

***

ನಮ್ಮ ಬಳಗದ ವಾರ್ಷಿಕೋತ್ಸವಕ್ಕೆ ಒಂದು ಕಡೆ ಸೇರಿದ್ದವು. ಗಿರಿಜೆಯೂ ಬಂದಿದ್ದರು. ನಿಮ್ಮ ಮಗಳು ನಮ್ಮ ನರ್ಮದಾಗೆ ಫ್ರೆಂಡ್ ಅಂತೇ? ಮನೇಲಿ ಹೇಳ್ತಿರ್ತಾಳೆ, ಹೌದೆಂಬಂತೆ ಗೋಣಾಡಿಸಿದೆ. ಸೊಸೇದು ಎಷ್ಟು ದೊಡ್ಡ ಮನಸ್ಸು ಅಂದ್ರೆ ಮನೆ ಮಾಲೀಕತ್ವ ಬದಲಾದರೂ ಆ ದುಡ್ಡು ನಿಮಗೆ ಸೇರಿದ್ದು ಅಂತ ನನ್ನ ಅಕೌಂಟಿಗೇ ಬರೋ ಹಾಗೆ ಮಾಡಿದ್ದಾಳೆ. ಬೀಗರೂ ಕೆಳಗೆ ಇದ್ದಾರೆ. ಒಳ್ಳೇ ಜನ. ಈಗ ಮನಸ್ಸಿಗೆ ಹಾಯಾಗಿದೆ ನೋಡಿ ಎಂದರು. ಒಳ್ಳೆಯ ಮನಸ್ಸಿನವರಿಗೆ ಒಳ್ಳೆಯದೇ ಆಗುತ್ತೆ ಎಂದೆ. ಮುಂದಿನ ತಿಂಗಳು ಮೊಮ್ಮಗನಿಗೆ ಮುಂಜಿ. ಕಾರ್ಡನ್ನು ನನ್ನ ಹೆಸರಲ್ಲೇ ಹೊಡೆಸ್ತಿದ್ದಾಳೆ. ನಾವಿಬ್ಬರೂ ಮನೆಗೇ ಬಂದು ಕರೀತೀವಿ ಖಂಡಿತ ಬರ್ಬೇಕು. ಗಿರಿಜೆಯ ಮುಖದಲ್ಲಿ ಸಂತಸ ತುಳುಕಿತ್ತು.

ಪ್ರತಿಕ್ರಿಯಿಸಿ: feedback@sudha.co.in

## ಜೀವನ

ಹಲವರ ಅನಿಸಿಕೆ
ಮದುವೆಯ ನಂತರ ಜೀವನ ಔಟ್ ಸ್ಟ್ಯಾಂಡು
ಬದುಕು ಶಿವನಾಟ
ಅಂದುಕೊಂಡಂಗೆ ಅಲ್ಲ
ಆಗಬಹುದು ಜೀವನ
ಬಸ್ ಸ್ಟ್ಯಾಂಡು..!



## ಸತಿ ಪತಿ

ಪತಿ ಹೇಳಿದ ಸತಿಗೆ
ನನ್ನದೇನಿದೆ ಇಲ್ಲಿ
ಎಲ್ಲಾ ನಿನ್ನದೇ ಉಳಿದಿಲ್ಲ ಏನೂ ಬಾಕಿ;
ಸತಿ ನಕ್ಕು ಕೇಳಿದಳು
ಕೊಡು ಮೊದಲು
ಲಾಕರ್ ಕೀ!

## ಮರೆವು



ಹಳೆಯದಾದವು
ಕಾಡು ಬೆಳೆಸಿ ನಾಡು ಉಳಿಸಿ
ಮನೆಗೊಂದು ಮರವಿರಲಿ
ಎನ್ನುವ ನುಡಿಗಳು;
ಮರೆತಿರುವ ಮನುಜಗೆ
ನೆನಪಿಸಲು ಬಂದಿವೆ
ಕಾಡು ಪ್ರಾಣಿಗಳು!

■ ವೆಂಕಟೇಶ ಚಾಗಿ, ಕೊಪ್ಪಳ

## ವಾಸ್ತವ

ಅವರು ಬೇಕು
ಇವರು ಬೇಕು
ಯಾರಿಗಾಗಿ ಈ ಬದುಕು!
ಕಾಣಲಿಲ್ಲ
ಸೇರಲಿಲ್ಲ
ಕತ್ತಲೆಯಲ್ಲಿ ಕನಸ ಬೆಳಕು!?
ಆದರೇನು
ಹೋದರೇನು
ಇಂದು ಮಾತ್ರ ನಮ್ಮದು!



## ಮಂಪರು

ಹನಿ ಹನಿ ಇಬ್ಬನಿ
ಚಳಿ ಬಿಸಿಲು ಕಂಡೆನಿ
ಕಂಬಳಿ ಹೊದ್ದು
ಹಾಗೇ ನಿದ್ದೆಗೆ ಬಿದ್ದು
ಏಳಲೇನು ಈಗಲೇ?!
ಸೂರ್ಯ ದೀಪ ಉರಿದ ಮೇಲೇ!

■ ಎಸ್‌ಆರ್‌ ನರಸಿಂಹ ಪ್ರಸಾದ್, ಕುಣಿಗಲ್

ಕಲೆ: ವಿಜಯ